ಗಾಂಧೀಜಿಯವರು, ನಿಜವಾದ ಪ್ರಜಾಪ್ರಭುತ್ವದಲ್ಲಿ ಅನಿವಾರ್ಯವಾಗಿ ಇರಲೇಬೇಕಾದ ಅಂಬೇಡ್ಕರರ 'ಜಾತಿವಿನಾಶ' ಚಿಂತನೆಯನ್ನು ಸಂಪೂರ್ಣ ಒಪ್ಪಿದ್ದರು. 1948ರ ನಂತರ ಅಂಬೇಡ್ಕರರು ಗಾಂಧಿಯವರ ಅನುಪಸ್ಥಿತಿಯನ್ನು ಆಳವಾಗಿ ಅನುಭವಿಸಿದ್ದರು. ಅಷ್ಟೇ ಅಲ್ಲ, 'ಗಾಂಧಿ ಬದುಕಿದ್ದರೆ ನಾನು ರಿಪಬ್ಲಿಕನ್ ಪಾರ್ಟಿಯನ್ನು ಕಟ್ಟಬೇಕಾದ ಅಗತ್ಯವಿರಲಿಲ್ಲ' ಎಂದು ಅಂಬೇಡ್ಕರ್ ಹೇಳಿದ್ದು ವರದಿಯಾಗಿದೆ. ಮುರುಟಿ ಹೋಗುವ 'ಸ್ಟೇಟ್'* ಕುರಿತು ಮಾರ್ಕ್ಸ್ ಮಾತನಾಡಿದರೆ, ಗಾಂಧಿಗೆ 'ಸ್ಟೇಟ್' ಅನ್ನುವುದು ಅನವಶ್ಯಕ ಎನಿಸಿತ್ತು, ಒಂದು ವೇಳೆ ಅದು ನಮಗೆ ಬೇಕೆಂದಾದರೆ, ತಳಮಟ್ಟದ ಜನರು ತೆಗೆದುಕೊಂಡ ನಿರ್ಧಾರಗಳನ್ನು ಜಾರಿಗೆ ತರುವುದರಲ್ಲಿ ನೆರವು ನೀಡಲು ಮಾತ್ರ ಎಂದು ಗಾಂಧಿ ನಂಬಿದ್ದರು. ಹಲವು ಕಾಲದ ನಂತರ ಜಾಕ್ವೆಸ್ ರ್‍ಯಾನ್ಸಿಯರ್* ಅವರು ರೂಪಿಸಿದ- ಕಣ್ಣಿಗೆ ಬೀಳದೆ ಇರುವವರು ಮುನ್ನೆಲೆಗೆ ಬರುವಂತೆ ಮಾಡುವ, ದನಿಯಿಲ್ಲದವರ ದನಿಯು ಎಲ್ಲರಿಗೂ ಕೇಳುವಂತೆ ಮಾಡುವ- ಕಮ್ಯುನಿಸ್ಟ್ ವ್ಯವಸ್ಥೆಯ ಹೊಳಹುಗಳನ್ನು ಗಾಂಧೀಜಿಯವರು ಬಹಳ ಹಿಂದೆಯೇ ಕಂಡುಕೊಂಡಿದ್ದರು. ಆ ವ್ಯವಸ್ಥೆಯು ಎಲ್ಲರಿಗಿಂತ ಬಡವರಾದವರಿಗೆ, ಸಮಾಜದಲ್ಲಿ ಅತ್ಯಂತ ದುರದೃಷ್ಟಶಾಲಿಗಳಾದವರಿಗೆ ಸಮಗ್ರವಾದ ಪ್ರತಿನಿಧೀಕರಣವನ್ನು ಕೊಡಬೇಕೆಂದು ಪ್ರತಿಪಾದಿಸುತ್ತದೆ. ಜಾತಿಶ್ರೇಣೀಕರಣದ ಸಮಸ್ಯೆಗಳನ್ನು 'ಸ್ಟೇಟ್' ಪರಿಹರಿಸುತ್ತದೆ ಎಂದು ಅಂಬೇಡ್ಕರ್ ಅವರು ನಂಬಿದ್ದರು. (ತಮ್ಮ ಜೀವನದ ಕೊನೆಯ ಹಂತದಲ್ಲಿ ಅವರು ಕೂಡ ಈ ಭ್ರಮೆಯಿಂದ ಹೊರಗೆ ಬಂದರು) ಆದರೆ ಗಾಂಧಿಯವರಿಗೆ, ಈ ಸಮಸ್ಯೆಯು ಕೇವಲ ಕಾನೂನು ಪ್ರಕಾರ ನಿಷೇಧಿಸುವುದರಿಂದ ಸರಿಹೋಗುವುದಿಲ್ಲ, ಬದಲಿಗೆ, ಸಾಮಾಜಿಕ ನೆಲೆಯಲ್ಲಿ ಸಮಾನತೆಯನ್ನು ಕುರಿತ ತಿಳಿವಳಿಕೆಯನ್ನು ಮೂಡಿಸುವುದರಿಂದ ಮಾತ್ರ ಸಾಧ್ಯವೆಂದು ತಿಳಿದಿತ್ತು. ಮಾರ್ಕ್ಸ್ ಮೊದಮೊದಲ ಹಂತದಲ್ಲಿ ಪ್ರತಿಪಾದಿಸಿದ ಮಾನವತಾವಾದ; ತನ್ನ ಬೆಳವಣಿಗೆಯ ನಡುಗಾಲದಲ್ಲಿ ಹೇಳಿದ 'ಸ್ಟೇಟ್' ಇಲ್ಲವಾಗುವ ಸಿದ್ಧಾಂತ; ಕೊನೆಕೊನೆಯಲ್ಲಿ ಕಟ್ಟಿಕೊಟ್ಟ ನಿಜವಾದ ಪ್ರಜಾಪ್ರಭುತ್ವದ ಪರಿಕಲ್ಪನೆ; ಹೋರಾಟ-ಒಡ್ಡಾಟಗಳಲ್ಲಿ ನರಳುತ್ತಿರುವ ಎಲ್ಲ ಸಮುದಾಯಗಳನ್ನು ಒಂದುಗೂಡಿಸುವ ಶಕ್ತಿಯೇ 'ಪ್ರೀತಿ' ಎಂದು ಒಪ್ಪಿಕೊಳ್ಳುವ ಇತ್ತೀಚಿನ ಮಾರ್ಕ್ಸ್‌ವಾದ; ಜಾತಿ ಶ್ರೇಣೀಕರಣವನ್ನು ನಿರ್ಮೂಲ ಮಾಡಬೇಕೆಂಬ ಅಂಬೇಡ್ಕರ್ ಅವರ ಹಂಬಲ ಮತ್ತು ಅಂಬೇಡ್ಕರರ ಕೊನೆಯ ಮೂರು ಪುಸ್ತಕಗಳಲ್ಲಿ ಸ್ಪಷ್ಟವಾಗುವಂತೆ ಮನುಷ್ಯರನ್ನು ಮುಕ್ತಗೊಳಿಸುವ ಶಕ್ತಿಯಾಗಿ ಆಧ್ಯಾತ್ಮಿಕತೆಯ ಅಗತ್ಯವಿದೆಯೆಂಬ ತಿಳಿವಳಿಕೆ... ಇವೆಲ್ಲವೂ ನೈತಿಕತೆಯ ತಳಹದಿಯನ್ನು ಹೊಂದಿರುವ ಸಮಾಜವನ್ನು ರೂಪಿಸಬೇಕೆಂಬ ಗಾಂಧೀಜಿಯವರ ಏಕೈಕ ಚಿಂತನೆಯಲ್ಲಿ ಒಂದುಗೂಡಿವೆ.

**◆ ಇಷ್ಟೆಲ್ಲ ಹೋರಾಟ, ಚಿಂತನೆಗಳನ್ನು ಹಾದು ಬಂದ ನಂತರವೂ... ಇವತ್ತಿನ ಕಾಲದಲ್ಲಿ 'ಜಾತ್ಯತೀತ' ಪದವು ಹೆಮ್ಮೆ, ಘನತೆಗೆ ಬದಲಾಗಿ ನಿಂದನೆಯಂತಾಗಿದೆ ಅನ್ನಿಸುತ್ತದೆ...**

ಈ ವಾಗ್ವಾದಕ್ಕೆ ಸಂಬಂಧಿಸಿ ಎರಡೂ ಕಡೆಯಿಂದ ತಪ್ಪಿದೆ. ಅನೇಕ ಎಡಪಂಥೀಯರು, ರ್‍ಯಾಶನಲಿಸ್ಟರು ಮತ್ತು ಉದಾರತಾವಾದಿಗಳಾದ ಮುಕ್ತಮನಸ್ಕರು 'ಜಾತ್ಯತೀತತೆ' ಎಂದರೆ ಯಾವುದೇ ಧರ್ಮವನ್ನು ನಂಬದಿರುವುದು ಎಂದೇ ಅರ್ಥೈಸುತ್ತಾರೆ. ಅದು ಸರಿಯಲ್ಲ. ಮೂಲಭೂತವಾಗಿ 'ಸೆಕ್ಯುಲರಿಸಂ' ಎನ್ನುವುದು ಪಾಶ್ಚಾತ್ಯ ಪರಿಕಲ್ಪನೆ, ಅದು ಏಕಧರ್ಮೀಯವಾದ ಸಾಮಾಜಿಕ ಸಂದರ್ಭದಲ್ಲಿ ಹುಟ್ಟಿತು. ಅದರ ಮೂಲ ಪ್ರತಿಪಾದಕರಾದ ಜಾರ್ಜ್ ಜೆ. ಹೋಲಿಯೋಕ್ ಮುಂತಾದವರಿಗೆ ಅದು ಧಾರ್ಮಿಕ ವಲಯದ ಆಚೆಗೆ ಇರುವ ಸಂಗತಿಯಾಗಿತ್ತು. ಅವನದೇ ಮಾತುಗಳಲ್ಲಿ ಹೇಳುವುದಾದರೆ, ಸೆಕ್ಯುಲರಿಸಂ ಎಂಬುದು ಮನುಷ್ಯನ ಭೌತಿಕ, ನೈತಿಕ ಮತ್ತು ಬೌದ್ಧಿಕ ನೆಲೆಗಳ ಬೆಳವಣಿಗೆಯನ್ನು ಅದರ ಶಿಖರಸ್ಥಿತಿಯವರೆಗೆ ಕೊಂಡೊಯ್ಯಲು ಬಯಸುವ ಸಂಗತಿ. ಈ ಕೆಲಸವನ್ನು ಜೀವನದ ಪರಮಧ್ಯೇಯವೆಂದು ಅದು ತಿಳಿಯುತ್ತದೆ. ಅದರ ಪ್ರಕಾರ ಮನುಷ್ಯನಿಗೆ ಸಹಜವಾದ ನೈತಿಕತೆಯೇ ದೈನಂದಿನ ಅಗತ್ಯಗಳಿಗೆ ಸಾಕೆಂದು ಅದು ತಿಳಿಯುತ್ತದೆ. ಅದಕ್ಕೆ ಆಸ್ತಿಕತೆ, ನಾಸ್ತಿಕತೆ ಮತ್ತು ಬೈಬಲ್‌ಗಳ ಅನಿವಾರ್ಯ ಅವಶ್ಯಕತೆಯೇನೂ ಇಲ್ಲ. ಇದನ್ನು ಸಾಧಿಸಲು ಸೆಕ್ಯುಲರಿಸಂಗೆ ಅದರದೇ